ಕೂತಿದ್ದರೆ ತಲೆ ಕೆಡಬಹುದೂನ್ನಿಸಿ ರಾಜಣ್ಣ 'ಬತ್ತಿನಿ ಗೌರಕ್ಕ' ಎಂದು ಏಳುವ ಹೊತ್ತಿಗೆ, 'ಯಾವಾಗಲೋ ಬಂದದ್ದು?' ಎನ್ನುತ್ತಾ ಹೊರಬಾಗಿಲಿಂದ ವ್ಯಕ್ತಿಯೊಂದು ಇಣುಕಿತು. ಯಾರಿರಬಹುದೆಂದು ರಾಜಣ್ಣ ಕತ್ತೆತ್ತಿ ಹೊರಗೆ ಕಾಲಿಕ್ಕಿದರೆ, ಮಾದರ ಹಟ್ಟಿಯ ಯಂತ್ರಮಣಪ್ಪ ಕಂಡ. ಯಂತ್ರಮಣಪ್ಪ ಮತ್ತೆ ಅದೇ ಪ್ರಶ್ನೆಯನ್ನೇ ಬೀಸಿದಾಗ 'ಮಧ್ಯಾನ್ನದಾಗ' ಅಂದ. 'ಬೆಂಗಳೂರು ಕಡೇಲಿ ಯೆಲ್ಲಾ ಕ್ಷೇಮವೊ' ಎಂದು ಯಂತ್ರಮಣಪ್ಪ ವಿಚಾರಿಸಿಕೊಂಡ ಪರಿಗೆ ರಾಜಣ್ಣ ನಕ್ಕ.

'ಅಲ್ಲ ನೀನೇ ಯೇಳಪ್ಪ ನಿಮ್ ಬೆಂಗಳೂರಲಿ ನಮ್ ಮೆಟ್ಟು ವಲಿಯೋ ಜನದೋರಿಗೆಲ್ಲ ವಂದೊಂದು ತಗಡಿನ ಪೆಟ್ಟಿಗೇ ಅಂಗಡಿಗೆ ಸಾಲ ಕ್ವಟ್ಟವರೆ, ಸುಳ್ಳೋ ದಿಟವೋ' ಎಂದು ಯಂತ್ರಮಣಪ್ಪ ಶುರುಮಾಡಿದ. ರಾಜಣ್ಣ 'ಹೂಂ' ಎಂದು ಕತ್ತು ಹಾಕಿದ. 'ಅಂತಾದ್ದರೊಳಗೆ ಆ ನನಮಗ ಬ್ಯಾಂಕ್ ಮ್ಯಾನೇಜರು ವಂದೇ ವಂದು ಸಾವುರಾ ಕ್ವಟ್ಟು, ಇನ್ನುಳಿದ ಸಾವುರಾನ ಆಮ್ಯಾಲೆ ಕ್ವಡತೀನಿ, ಮೊದಲು ಇದನ್ನು ತೀರಿಸು ಅಂತ ನನೀಗೇ ಟೋಪಿ ಹಾಕಾಕೆ ಬಂದವನಲ್ಲ, ಆಂ!' ಅಂದು ನಿಲ್ಲಿಸಿದ. ರಾಜಣ್ಣ ಅವನ ಮುಖವನ್ನೇ ನೋಡಿದ.

'ನೋಡು ಆ ತಾಯಿ ಪಾದಸಾಕ್ಷಾಣೆ ಯೇಳತಿನಿ, ಕುಡುದುಗಿಡುದುಲ್ಲ. ಈ ಯಂತ್ರಮಣಪ್ಪ ಯಂತೋನೂ ಅಮ್ತ ಅವ್ವಾರ್ನ ಕೇಳು' ಅಂದು, ಗೌರಕ್ಕನಿಂದ 'ದಿಟ' ಎಂಬ ಒಪ್ಪಿಗೆ ಪಡಕೊಂಡು, 'ಅಲ್ಲ ಮಾತಿಗೇಳುತೀನಿ, ಆ ಶಾಟದ ಮ್ಯಾನೇಜ್ರು ಹಿಂಗೆಲ್ಲ ಅಲಾಲುಟೋಪಿ ಆಡಿಕೊಂಡು ಇಂಗ್ಲೀಷಿನಲ್ಲಿ ಗೆಟೋಟ್ ಅಂತ ಜೋರು ಕಿಸಿದನಲ್ಲ. ಅವನೊಬ್ಬನೇಯ ಇಂಗ್ಲೀಷ ಕಂಡೋನು! ನನಮಗ ರಂಗಯ್ಯನೂವೆ ಬ್ಯೆಂಗಳೂರು ಟವನ್ನಿನೊಳಗೆ ಇಂಗ್ಲೀಷ್ ಮಾತಾಡೋ ಆಪೀಸರೂಂತ ಯೇಳಿದ್‌ನಲಾ! ಥಂಡು, ಥಂಡೊಡೆದು ಬಿಟ್ಟನಲ್ಲ ಆ ನನಮಗ ಮ್ಯಾನೇಜ್ರು! ಪೂರಾಪೂರಾ ಸಾಲ ಬಿಸಾಕಲಿ, ತಿಂಗಳಾತಿಂಗಳಾ ನೂರು ನೂರು ರೂಪಾಯಿ ಕಂತು ಎಣಿಸಿಕೊಳ್ಳಲಿ; ಇಲ್ಲದೇ ಹೋತೋ ಒಂದು ನಯಾ ಪೈಸಾ ಕಟ್ಟಂಗಿಲ್ಲ, ಮಾಡೋದು ಮಾಡಿಕೋಬೌದು, ಹರಿಯೋದು ಹರುಕೋಬೌದು...' ಮುಂತಾಗಿ ದನಿಯೇರಿಸಲಾರಂಭಿಸಿದ ಯಂತ್ರಮಣಪ್ಪನ ನಾಲಿಗೆ, ಕಣ್ಣೊಳಗೆಲ್ಲ ಧಗಧಗ ಎನ್ನುವ ಉರಿ ಕಂಡ ರಾಜಣ್ಣ 'ಅದಿರ್ಲಿ, ಈಗ ಬಂದದ್ದ ಏಳಯ್ಯ' ಅಂದ. ಯಂತ್ರಮಣಪ್ಪ 'ಅಯ್ಯಾರತ್ತರ ಕ್ಯಲಸವಿತ್ತು' ಅಂದ.

ಯಂತ್ರಮಣಪ್ಪನ ಮೂರೆಕೆರೆ ಹೊಲವನ್ನು ಅಪ್ಪ ಸರಕಾರದ ಆರ್ಡರು ಬಂದರೂ ಬಿಟ್ಟುಕೊಡದಿರುವುದೂ, ಅಲ್ಲಿಗೆ ಯಂತ್ರಮಣಪ್ಪ ಕಾಲಿಕ್ಕಿದರೆ ಮುಗಿಸಿಬಿಡುವುದಾಗಿ ಗುಟುರು ಹಾಕಿದ್ದಕ್ಕೆ ಪಕ್ಕದ ಶಿಪಟೂರಿನ ದಲಿತ ಸಂಘದವರು ಮೆರವಣಿಗೆ ತೆಗೆದು ತಿಂಗಳ ಗಡುವು ಕೊಟ್ಟಿರುವುದೂ ನೆನಪಾಗಿ ಇವನ ಹತ್ತಿರ ಏನನ್ನು ಮಾತಾಡುವುದು ಎಂಬ ಅಳುಕು ಕಾಡತೊಡಗಿ ರಾಜಣ್ಣ ಇವನಿಂದ ಕಳಚಿಕೊಳ್ಳುವ ಯತ್ನ ನಡೆಸಿದ್ದರೂ ಯಂತ್ರಮಣಪ್ಪ ಒಪ್ಪಿಸುತ್ತಲೇ ಇದ್ದ: 'ಓದ್ದೋರು, ಇದ್ಯಾವಂತ್ರು ನೀವೇ ಯೋಚಣೆ ಮಾಡಿ, ನಮ್ಮ ರೈತರ ಸಂಗದೊಳಗೆ ಸೆಕೇಟ್ರಿಯಾದಂಥ ಅಯ್ನೋರೆ ಇಂಥಾದ್ದ ಮಾಡಿದ್ದಾದರೆ, ಬೇಲಿ ಅಂಬತಕ್ಕಂತದೇನೆ ವಲಾನ ಮೇದರೆ...' ಎಂದು ಮುಂದುವರಿಸಿದಾಗ, ಆ ಪ್ರಶ್ನೆಗಳನ್ನು ಎದುರಿಸಲು ದಮ್ಮಿಲ್ಲದೆ, 'ನೀನಿನ್ನು ನಡುದರಪ್ಪ' ಎಂದು ಹೊರಡಿಸಿ ರಾಜಣ್ಣ ನಡುಮನೆಗೆ ನಡೆದುಬಿಟ್ಟ.

ಅವನು ಹೊರಡುವ ತನಕ ಉಸಿರು ಕಿಸಿಯದೆ ಕೂತುಕೊಂಡಿದ್ದ ಶಿವಣ್ಣಯ್ಯ, 'ಮಿಂಡರಗುಟ್ಟಿದೋನ ಬಾಯಿ ನೋಡುದಾ, ಮೂರು ಕುಲಕುಟ್ಟಿದೋನ ತಿಮಿರು ನೋಡುದಾ' ಮುಂತಾಗಿ ಗೊಣಗಲು ಶುರು ಮಾಡಿದಾಗ ರಾಜಣ್ಣ ತುಟಿಬಿಚ್ಚದೆ ಒಳಗೆ ನಡೆದ. ಅವ್ವ,